**IN THE COURT OF THE SENIOR CIVIL JUDGE AND JMFC, TIPTUR.**

**CC No. 650/2018**

**DW-1**

**Oath is administered to the witness on 12.08.2025**

**Cross examination by: Sri. H.S.G Counsel for complainant**

ನಾನು ಸಾಯಿ ಸಂದೇಶ್ ಎಂಬ ಹೆಸರಿನ ಫರ್ಮ್ ನಲ್ಲಿ ಕೊಬ್ಬರಿ ವ್ಯಾಪಾರ ಮಾಡಿಕೊಂಡಿದ್ದೇನೆ ಎಂದರೆ ನಿಜ. ಖಾಸಗಿ ದೂರಿನಲ್ಲಿ ತೋರಿಸಿರುವ ವಿಳಾಸದಲ್ಲಿಯೇ ನಾನು ವಾಸವಿದ್ದೇನೆ. ಪಿರ್ಯಾದಿಯು ಸಹ ಸಾಯಿ ಟ್ರೇಡರ್ಸ್ ಎಂಬ ಹೆಸರಿನ ಫರ್ಮ್ ನಲ್ಲಿ ಕೊಬ್ಬರಿ ವ್ಯಾಪಾರ ಮಾಡುತ್ತಾರೆ ಎಂದರೆ ನಿಜ. ನಾನು ಪಿರ್ಯಾದಿಯ ಸಾಯಿ ಟ್ರೇಡರ್ಸ್ ನಲ್ಲಿ ಕೊಬ್ಬರಿ ವ್ಯವಹಾರ ಮಾಡುತ್ತೇನೆ ಎಂದರೆ ಸಾಕ್ಷಿಯು ಆಗಾಗ ಮಾಡುತ್ತೇನೆ ಎಂದು ಹೇಳುತ್ತಾರೆ. ನಾನು ವ್ಯಾಪಾರಸ್ಥರಾಗಿರುವ ಕಾರಣ ಬ್ಯಾಂಕಿನ ಮೂಲಕ ಮಾತ್ರ ನಾನು ವ್ಯವಹಾರ ಮಾಡುತ್ತೇನೆ ಎಂದರೆ ನಿಜ. ಆನ್ ಲೈನ್ Transaction ಪ್ರಾರಂಭವಾದ ಬಳಿಕ ನಾನು ಆನ್ ಲೈನ್ ಮೂಲಕ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ನಿಜ. ನಾನು ಯಾರಿಗಾದರೂ ಸಾಲ ಕೊಡುವಾಗ ಮತ್ತು ಸಾಲ ತೆಗೆದುಕೊಳ್ಳುವಾಗ ನನ್ನ ಬಳಿ ಇರುವ ದಿನಚರಿ ಪುಸ್ತಕದಲ್ಲಿ ಅದನ್ನು ನಮೂದು ಮಾಡುತ್ತೇನೆ. ಆ ದಿನಚರಿ ಪುಸ್ತಕದಲ್ಲಿ ಇರುವ ಅಂಶಗಳನ್ನು ನಾನು ಪ್ರತಿ ವರ್ಷ ಆಡಿಟ್ ಮಾಡಿಸುತ್ತೇನೆ. ಪಿರ್ಯಾದಿಯು ಕೊಬ್ಬರಿ ವ್ಯವಹಾರ ಹೊಂದಿರುವುದಲ್ಲದೆ ಬೇರೆ ಆತನ ವೈಯಕ್ತಿಕ ಹಣಕಾಸಿನ ವ್ಯವಹಾರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಅವರು ಹಣವನ್ನು ಕೊಡುವುದು ತೆಗೆದುಕೊಳ್ಳುವುದು ಮಾಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಮತ್ತು ಪಿರ್ಯಾದಿಯ ನಡುವೆ ಹಣಕಾಸಿನ ವ್ಯವಹಾರ ಆಗಿತ್ತು ಎಂದು ಹೇಳಿದ್ದು ಆ ಬಗ್ಗೆ ನನ್ನ ಬಳಿ ದಾಖಲೆ ಇದೆ. ಅದನ್ನು ನಾನು

ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಪಿರ್ಯಾದಿಯು ಕೊಬ್ಬರಿ ಮತ್ತು ಅದರ ಉತ್ಪನ್ನಗಳ ವ್ಯಾಪಾರಸ್ಥನಾಗಿರುವ ಕಾರಣ ಆತ ಆರ್ಥಿಕವಾಗಿ ಸಬಲನಾಗಿದ್ದಾನೆ ಎಂದರೆ ಗೊತ್ತಿಲ್ಲ.

ನನ್ನ ತಮ್ಮ ಸುರೇಶ್ ಜವಳಿ ವ್ಯಾಪಾರ ಮಾಡುತ್ತಾರೆ. ಆತ ಆಂದ್ರ ಪ್ರದೇಶದ ನಲ್ಲೂರು ಜಿಲ್ಲೆಯ ಬೂಚಿರೆಡ್ಡಿ ಪಾಳ್ಯದಲ್ಲಿ ವಾಸವಿದ್ದಾರೆ ಎಂದರೆ ನಿಜ. ಆತ ಜವಳಿ ವ್ಯಾಪಾರದೊಂದಿಗೆ ಕೊಬ್ಬರಿಯ ರೀಟೇಲ್ ವ್ಯಾಪಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಪ್ರಕಾಶ್ ಎನ್ನುವವರು ನನ್ನ ಸಹೋದರ ಸುರೇಶ್ ಎನ್ನುವವರ ಆತ್ಮೀಯ ಸ್ನೇಹಿತ ಎಂದರೆ ಗೊತ್ತಿಲ್ಲ. ಪ್ರಕಾಶ್, ಸುರೇಶ್ ಮತ್ತು ಪಿರ್ಯಾದಿಯ ನಡುವೆ ನಡೆದ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ. ಪಿರ್ಯಾದಿಯು ನನ್ನ ಬಳಿ ಬಂದು ಹಣ ಕೇಳಿದ್ದರು ಮತ್ತು ನಾನು ನನ್ನ ಬಳಿ ಹಣ ಇಲಲ ಎಂದು ಹೇಳಿದ್ದು ಆ ಸಮಯದಲ್ಲಿ ನಾನು ಆರ್ಥಿಕವಾಗಿ ದುರ್ಬಲವಾಗಿದ್ದೆ ಎಂದರೆ ಸರಿಯಲ್ಲ. ನಾವು ಆರ್ಥಿಕವಾಗಿ ಚೈತನ್ಯ ಹೊಂದಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಯಾರಾದರೂ ಯಾರಿಗಾದರೂ ಸಾಲ ಕೊಡುವುದಾದರೆ ದಾಖಲೆಗಳನ್ನು ಪಡೆದುಕೊಂಡೇ ಸಾಲ ಕೊಡುತ್ತಾರೆ ಎಂದರೆ ನಿಜ. ಪಿರ್ಯಾದಿ ಮತ್ತು ನನ್ನ ಸಹೋದರ ಸುರೇಶ್ ರವರಿಗೆ ಯಾವುದೇ ಪರಿಚಯ ಇರಲಿಲ್ಲ. ಪರಿಚಯ ಇಲ್ಲದೇ ಇರುವ ವ್ಯಕ್ತಿಗಳಿಗೆ ಸಾಲ ಕೊಡುವುದಾದರೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದುಕೊಂಡೇ ಸಾಲ ಕೊಡುತ್ತಾರೆ ಎಂದರೆ ನಿಜ. ನಿಡಿ-1 ದಾಖಲೆಯು ನನ್ನ ಸಹೋದರ ತಂದು ಕೊಟ್ಟಿರುತ್ತಾನೆ. ಸದರಿ ದಾಖಲೆಯನ್ನು ನಾನು ನೋಡಿದ್ದೇನೆ ಮತ್ತು ಅದರಲ್ಲಿ ಏನಿದೆ ಎಂದು ತಿಳಿದುಕೊಂಡಿರುತ್ತೇನೆ. ನನಗೆ Assets and liabilities ಬಗ್ಗೆ ಅಲ್ಪ ಸ್ವಲ್ಪ ಮಾಹಿತಿ ಇದೆ. ನಿಡಿ-1 ರಲ್ಲಿ ತೋರಿಸಿದಂತೆ ನನ್ನ ಸಹೋದರ ದಿಃ 12-02-2018 ರಂದು ಬ್ಯಾಂಕಿಗೆ ರೂ. 2,45,121 ರೂ. ಬಾಕಿದಾರನಾಗಿದ್ದ ಎಂದರೆ ಸರಿಯಲ್ಲ. ದಿಃ 12-07-2018 ರಂದು ನನ್ನ ಸಹೋದರ ಸುರೇಶ್ ರವರ ಖಾತೆಯಿಂದ 7 ಲಕ್ಷ ರೂಪಾಯಿ ಹಣವನ್ನು ಪಿರ್ಯಾದಿಯ ಖಾತೆಗೆ ವರ್ಗಾಯಿಸಿದ್ದಾರೆ ಎಂದು ನಾನು ಹೇಳಿದ್ದು

ಅದು ಬೇರೆ ಯಾವುದೋ ಖಾತೆಗೆ ರೂ. 6,99,941 ವರ್ಗಾವಣೆ ಆಗಿದೆ ಎಂದರೆ ಸರಿಯಲ್ಲ. ಆ ಹಣ ವರ್ಗಾವಣೆ ಆಗಿರುವುದಕ್ಕೂ ಮತ್ತು ಪಿರ್ಯಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದಿಗೆ 7 ಲಕ್ಷ ರೂ. ಹಣ ನನ್ನ ಸಹೋದರ ಕೊಟ್ಟಿದ್ದಾನೆ ಎಂದು ಹೇಳಿದ್ದು ಆತ ಯಾವತ್ತಾದರೂ ಆ ಹಣ ಮರು ಪಾವತಿ ಮಾಡಿ ಎಂದು ಕೇಳಿದ್ದಾನಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆತ ಕೇಳಿಲ್ಲ ಆದರೆ ಮಧ್ಯದಲ್ಲಿ ನಾನು ಹಣ ಕೊಟ್ಟಿದ್ದರಿಂದ ಕೇಳಿದ್ದೇನೆ ಎಂದು ಹೇಳುತ್ತಾರೆ.

ನನ್ನ ಚೆಕ್ ಕಳೆದು ಹೋಗಿದೆ ಎಂದು ಹೇಳಿದ್ದು ಅದರ ನಂಬರ್ ನನಗೆ ನೆನಪಿರುವುದಿಲ್ಲ. ನನನ ಚೆಕ್ ಕಳೆದು ಹೋಗಿದೆ ಎಂದು ನಾನು ಬ್ಯಾಂಕಿಗೆ ಅರ್ಜಿ ಕೊಟ್ಟಿದ್ದೇನೆ. ಆ ರೀತಿ ಕೊಟ್ಟ ಅರ್ಜಿಯು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರಲಿಲ್ಲ. ನಾನು ವ್ಯವಹಾರಸ್ಥಳಾಗಿರುವ ಕಾರಣ ಚೆಕ್ ಕಳೆದು ಹೋದರೆ ನಾನು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ ಎಂದರೆ ನಿಜ. ಸಾಕ್ಷಿಯು ಆಗ ನನ್ನ ಗಂಡನ ಆರೋಗ್ಯ ಸಮಸ್ಯೆ ಇದ್ದ ಕಾರಣ ತಕ್ಷಣ ಕ್ರಮ ಕೈಗೊಳ್ಳಲು ಆಗಿರಲಿಲ್ಲ ಎಂದು ಹೇಳುತ್ತಾರೆ. ನಾನು ಆ ರೀತಿ ಚೆಕ್ ಕಳೆದು ಹೋದ ಬಗ್ಗೆ ಪೊಲೀಸ್ ಠಾಣೆಗೆ ದೂರು ಕೊಟ್ಟಿಲ್ಲ. ನಾನು ಆ ರೀತಿ ಚೆಕ್ ಕಳೆದು ಹೋಗಿದೆ ಎಂದು ಬ್ಯಾಂಕಿಗೆ ಅಫಿಡವಿಟ್ ಕೊಟ್ಟಿಲ್ಲ. ನಾನು ನಮ್ಮ ಅಂಗಡಿಯ ವ್ಯವಹಾರವನ್ನು ನಮ್ಮ ಅಂಗಡಿಯ ಕ್ಲರ್ಕ್ ನಿಂದ ಮಾಡಿಸುತ್ತೇನೆ ಎಂದರೆ ನಾನು ಸಹ ನೋಡಿಕೊಳ್ಳುತ್ತೇನೆ ಎಂದು ಹೇಳುತ್ತಾರೆ. ಅವಶ್ಯಕತೆ ಇಲ್ಲದೆ ಇದ್ದಾಗ ನನ್ನ ಚೆಕ್ ಗಳಿಗೆ ಸಹಿ ಮಡಿ ಇಡುವುದಿಲ್ಲ ಎಂದರೆ ನಿಜ. ನಾನು ಅರ್ಜಂಟಾಗಿ ಹೋಗುವುದಿತ್ತು ಮತ್ತು ಆ ಕಾರಣದಿಂದ ಒಂದು ಚೆಕ್ ಗೆ ಸಹಿ ಮಾಡಿ ಇಟ್ಟಿದ್ದೆ ಎಂದು ಹೇಳುತ್ತಾರೆ. ನಾನು ಚೆಕ್ ನ ಕೌಂಟರ್ ಫೈಲ್ ನಲ್ಲಿ ಯಾರಿಗೆ ಆ ಚೆಕ್ ಕೊಡುತ್ತಿದ್ದೇನೆ ಎಂದು ಬರೆದು ಚೆಕ್ ಕೊಡುತ್ತೇನೆ.

ಈಗ ನನಗೆ ತೋರಿಸುತ್ತಿರುವ ವಕಾಲತ್ ನಲ್ಲಿರುವ ಸಹಿಯು ನನ್ನದೇ ಆಗಿದೆ. ನಿಪಿ-1 ಚೆಕ್ ನಲ್ಲಿರುವ ಸಹಿಯು ನನ್ನದೇ ಆಗಿದೆ.

ವಕೀಲರ ಮೂಲಕ ಪಿರ್ಯಾದಿಯು ನನಗೆ ನೋಟೀಸು ಕಳುಹಿಸಿದ್ದನ್ನು ತಲುಪಿತ್ತು ಎಂದರೆ ಸರಿಯಲ್ಲ. ನನ್ನ ತಮ್ಮನ ಐಟಿ ರಿಟರ್ನ್ಸ್ ನ್ನು ನ್ಯಾಯಾಲಯಕ್ಕೆ

ಹಾಜರು ಪಡಿಸಲು ತೊಂದರೆ ಇಲ್ಲ. ಪಿರ್ಯಾದಿಯು ನನ್ನ ಸಹೋದರನಿಂದ 7 ಲಕ್ಷ ಹಣ ಪಡೆಯುವಷ್ಟು ಆರ್ಥಿಕವಾಗಿ ತೊಂದರೆ ಇರಲಿಲ್ಲ ಮತ್ತು ನಾನು ಆ ರೀತಿ ಪಿರ್ಯಾದಿಯು ನನ್ನ ಸಹೋದರರದಿಂದ ಹಣ ಪಡೆದಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಬ್ಬರಿ ಕಳುಹಿಸಿದಾಗ 3 ಕಾಪಿ E-way and permit ಹೋಗುತ್ತವೆ ಎಂದರೆ ನಿಜ. ಎಪಿಎಂಸಿ ಕಛೇರಿಯಿಂದ ಅನುಮೋದನೆ ಆದ ಬಳಿಕ E-way and permit ಹೋಗುತ್ತವೆ ಎಂದರೆ ನಿಜ. Computer generated bill ನಲ್ಲಿ QR code ಮಾತ್ರ ಇರುತ್ತದೆ ಸಹಿ ಇರುವುದಿಲ್ಲ ಎಂದರೆ ನಿಜ. ನಿಪಿ-3 ರಂತೆ ಎಪಿಎಂಸಿ ಯವರು QR code ಹೊಂದಿರುವ ದಾಖಲೆ ಕೊಡುತ್ತಾರೆ ಎಂದರೆ ನಿಜ. ನಿಪಿ-4 ರ ಮೇಲೆ ಇರುವಂತೆ ಕೋಡ್ ಸಹ ಎಪಿಎಂಸಿಯವರೇ QR code ಕೊಡುತ್ತಾರೆ ಎಂದರೆ ನಿಜ. ಆ ರೀತಿ ಎಪಿಎಂಸಿ ಯವರು ಕೊಟ್ಟಂತಹ ಬಿಲ್ ಗಳು ನಿಖರವಾದ ಬಿಲ್ ಗಳು ಆಗಿರುತ್ತವೆ ಎಂದರೆ ನಿಜ. ನಾನು ಪಿರ್ಯಾದಿಯಿಂದ ಕೊಬ್ಬರಿಯನ್ನು ಖರೀದಿ ಮಾಡಿ ಅದರ ಬಾಕಿ ಹಣವನ್ನು ಕೊಡಲು ನಿಪಿ-1 ಚೆಕ್ ನ್ನು ಪಿರ್ಯಾದಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆ ರೀತಿ ನಾನು ಕೊಟ್ಟಂತಹ ಚೆಕ್ ಅನಗಧೀಕರಣ ಆಗಿದ್ದು ಪಿರ್ಯಾದಿಯು ನನಗೆ ನೋಟೀಸು ಕೊಟ್ಟಿದ್ದರೂ ಸಹ ನಾನು ಹಣ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ನಾನು ಪಿರ್ಯಾದಿಗೆ ಬಾಕಿದಾರಳಾಗಿದ್ದೇನೆ ಎಂದರೆ ಸರಿಯಲ್ಲ.

**Re-Examination NIL**

**(R.O.A & I.C.)**

**(Mohamed Arifulla C.F)**
SENIOR CIVIL JUDGE JMFC,
TIPTUR